ಕರ್ನಾಟಕ ವಿಧಾನ ಸಭೆ

ಗುರುವಾರ, ೧೨ನೇ ಸೆಪ್ಟೆಂಬರ್ ೧೯೮೫

ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸದನವು ಬೆಳಗ್ಗೆ ಒಂಬತ್ತು ಘಂಟೆಗೆ ಸಮಾವೇಶಗೊಂಡಿತು.

ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಆವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆಗುರುತಿನ ಮತ್ತು ಚುಕ್ಕೆಗುರುತಿಲ್ಲದ ಪ್ರಶ್ನೋತ್ತರಗಳ ಪಟ್ಟಿಯಂ ಮಂಡನೆ

ಅಧ್ಯಕ್ಷರು.—ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಗಳ ಳಳ (೨)ನೇ ನಿಯಮದ ಮೇರೆಗೆ ೧೨.೯.೧೯೮೫ನೇ ದಿನಾಂಕದ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುವುದು.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಚುಕ್ಕೆ ಗುರುತಿನ ಹಾಗೂ ಚುಕ್ಕೆರಹಿತ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರಗಳ ಪಟ್ಟಿಯನ್ನು ಮಂಡಿಸಲಾಯಿತು.

ಕೋಲಾರ ಜಿಲ್ಲೆಯಲ್ಲಿ ರೇಯನ್ ಕಾರ್ಖಾನೆಯ ಸ್ಥಾಪನೆ

೭೧೬ (೧೦೧೩) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಕೋಲಾರ ನಗರದ ಹತ್ತಿರ ಒಂದು ರೇಯನ್ ಕಾರ್ಖಾನೆ ಸ್ಥಾಪಿಸಲು ಬೇಡಿಕೆ ಬಂದಿದ್ದೀತೇ ? ಹಾಗಿದ್ದಲ್ಲಿ, ಆ ಬಗ್ಗೆ ಕೈಗೊಂಡ ಕ್ರಮವೇನು ?

ಆ) ಕೋಲಾರ ನಗರದ ಟಮಕ ಪ್ರದೇಶದಲ್ಲಿ ಅನೇಕ ಕೈಗಾರಿಕಾ ಷೆಡ್‌ಗಳನ್ನು ನಿರ್ಮಿಸಿ ಅವುಗಳನ್ನು ಇನ್ನೂ ಗೊತ್ತು ಪಡಿಸದಿರುವುದಕ್ಕೆ ಕಾರಣವೇನು ?

ಇ) ಸದರಿ ಷೆಡ್ಡುಗಳನ್ನು ಕೂಡಲೇ ಗೊತ್ತುಪಡಿಸಲಾಗುವುದೇ ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು).—

ಅ) ಬಂದಿಲ್ಲ.

ಆ) ಮತ್ತು ಇ) ಕೋಲಾರ ಜಿಲ್ಲಾ ಮಟ್ಟದ ಮಳಿಗೆಗಳ ವಿತರಣಾ ಸಮಿತಿ ಮಳಿಗೆಯನ್ನು ವಿತರಣೆ ಮಾಡುವಂತೆ ನಿರ್ಧರಿಸಿದ್ದರಿಂದ ವಿತಾರಣಾ ಪತ್ರಗಳು ಹಂಚಿಕೆಯ ಹಂತದಲ್ಲಿವೆ.

ಬಂಗಾರ ಪೇಟೆಯಲ್ಲಿ ಕೈಗಾರಿಕಾ ಅಭಿವೃದ್ಧಿ

೭೧೭ (೧೯೪೪) ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕೋಲಾರ ಜಿಲ್ಲೆ ಬಂಗಾರ ಪೇಟೆಯಲ್ಲಿ ಕೈಗಾರಿಕಾ ಅಭಿವೃದ್ಧಿ ಪ್ರದೇಶಕ್ಕಾಗಿ ನಿವೇಶನವನ್ನು ಗೊತ್ತುಪಡಿಸಿದ್ದು ಆ ಬಗ್ಗೆ ನಿರ್ಮಾಣ ಕಾಮಗಾರಿಗಳು ಯಾವ ಹಂತದಲ್ಲಿವೆ ಹಾಗೂ ಎಂದು ಪ್ರಾರಂಭವಾಗುವುದು ?

ಆ) ಅಲ್ಲಿ ಯಾವ ರೀತಿಯ ಸಣ್ಣ ಕೈಗಾರಿಕೆಗಳು ಪ್ರಾರಂಭವಾಗುತ್ತವೆ ಹಾಗೂ ಅವುಗಳ ಸಂಖ್ಯೆ ಎಷ್ಟು ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು).—

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯವರು ದಾಸರ ಹೊಸಹಳ್ಳಿ ಗ್ರಾಮದಲ್ಲಿ ೧೦೦ ಎಕರೆ ೩ ಗುಂಟೆ ಜಮೀನನ್ನು ಕೈಗಾರಿಕಾ ನಿವೇಶನಗಳ ನಿರ್ಮಾಣಕ್ಕಾಗಿ ಪಶಪಡಿಸಿಕೊಂಡಿದೆ. ಇದರ ಪೈಕಿ ೩೫ ಎಕರೆ ೧೨ ಗುಂಟೆ ಜಮೀನಿನ ಬಗ್ಗೆ ಕರ್ನಾಟಕ ಮಹಾ ನ್ಯಾಯಾಲಯದಲ್ಲಿ ತಡೆ ಆಜ್ಞೆಯನ್ನು ನೀಡಿರುವುದರಿಂದ ಅಭಿವೃದ್ಧಿ ಕಾರ್ಯಕ್ರಮವನ್ನು ತಡೆಹಿಡಿಯಲಾಗಿದೆ. ವಶಪಡಿಸಿಕೊಂಡಿರುವ ೬೫ ಎಕರೆ ೨೪ ಗುಂಟೆ ಜಮೀನಿನಲ್ಲಿ ಯೋಜನಾ ನಕ್ಷೆಯನ್ನು ತಯಾರಿಸಲಾಗಿದ್ದು ಕೋಲಾರ ನಗರದ ಯೋಜನಾ ಅಧಿಕಾರಿಗಳು ಪರವಾನಿಗೆಯನ್ನು ಪಡೆಯುವ ಬಗ್ಗೆ ಮುಂದಿನ ಕ್ರಮ ತೆಗೆದು ಕೊಳ್ಳಲಾಗುತ್ತಿದೆ.

ಆ) ಬಂಗಾರು ಪೇಟೆ ಪ್ರದೇಶದಲ್ಲಿ ಕಚ್ಚಾ ಪದಾರ್ಥಗಳನ್ನಾಧರಿಸಿ ಸಣ್ಣ ಕೈಗಾರಿಕೆಗಳು ಸಾಕಷ್ಟು ಪ್ರಮಾಣದಲ್ಲಿ ಬರುವ ಸಾಧ್ಯತೆ ಇರುವುದರಿಂದ ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸಲಾಗುತ್ತಿದೆ.

ಕೆಂಗಲ್ ಹನುಮಂತಯ್ಯನವರ ಪ್ರತಿಮೆ

೭೧೮ (ಳಳಲ) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ವಿಧಾನಸೌಧದ ಬಳಿ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರ ಪ್ರತಿಮೆಯನ್ನು ಎಂದು ಸ್ಥಾಪಿಸಲಾಯಿತು ಮತ್ತು ಇದಕ್ಕೆ ತಗುಲಿದ ವೆಚ್ಚವೆಷ್ಟು ?

ಆ) ಈ ಪ್ರತಿಮೆಯ ರಚನೆ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿವೆಯೇ ?

ಇ) ಪ್ರತಿಮೆಯ ಅಡಿಯಲ್ಲಿ ಕೆಂಗಲ್ ಹನುಮಂತಯ್ಯ ಅವರ ಪ್ರತಿಮೆ ಎಂದು ಉಲ್ಲೇಖಿಸಲಾಗುವುದೇ ?

ಈ) ಇದೇ ರೀತಿ ಯಾರ‍್ಯಾರ ಪ್ರತಿಮೆಗಳನ್ನು ವಿಧಾನ ಸೌಧದ ಸುತ್ತ ಸ್ಥಾಪಿಸಲು ಸರ್ಕಾರ ದವರು ಯೋಚಿಸಿದ್ದಾರೆ?

ಶ್ರೀ ಎ. ಲಕ್ಷ್ಮಿಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳು).—

ಅ) ಶ್ರೀಮಾನ್ ಕೆಂಗಲ್ ಹನುಮಂತಯ್ಯನವರ ಪ್ರತಿಮೆಯನ್ನು ದಿನಾಂಕ: ೨೨.೬.೮೫ರಂದು ಸ್ಥಾಪಿಸಲಾಯಿತು ಮತ್ತು ಒಟ್ಟು ರೂ. ೪.೦೦ ಲಕ್ಷ ವೆಚ್ಚವಾಗಿದೆ.

ಆ) ಹೌದು.

ಇ) ಎಲ್ಲಾ ಪ್ರತಿಮೆಗಳ ಅಡಿಯಲ್ಲಿ ಉಲ್ಲೇಖಿಸುವಂತೆ ಇದರ ಅಡಿಯಲ್ಲಿ ಉಲ್ಲೇಖಿಸಿದೆ.

ಈ) ಇದೇ ರೀತಿ ಜವಹರಲಾಲ್ ನೆಹರು, ಜಯಪ್ರಕಾಶ ನಾರಾಯಣ ಮತ್ತು ಡಿ. ದೇವರಾಜ ಅರಸುರವರ ಪ್ರತಿಮೆಯನ್ನು ವಿಧಾನ ಸೌಧದ ಸುತ್ತ ಸ್ಥಾಪಿಸಲು ಸರ್ಕಾರ ತೀರ್ಮಾನ ತೆಗೆದು ಕೊಂಡಿದೆ.